# ನಾ ನಿನಗೇನ ಬೇಡುವುದಿಲ್ಲ

1. **Ref.:** Shri Purandara Dasara Sahitya Part – 1, Pooja Tatva, edited by Shri Betageri Krishna Sharma and Shri Bengeri Huchha Rayaru, page No. 94.
2. **Note:** This song is not available in other standard books that I refer.
3. **Note:** There is a similar song by Sri Sripadaraajaru with the Ankita "ranga viTTala". Few wordings are different.

ರಾಗ: ನಾದನಾಮಕ್ರಿಯೆ ತಾಳ: ಅಟ

ನಾ ನಿನಗೇನ ಬೇಡುವುದಿಲ್ಲ - ಎನ್ನ
ಹೃದಯ ಕಮಲದೊಳು ನೆಲಸಿರು ಹರಿಯೆ ॥ ಪ ॥

ಶಿರ ನಿನ್ನ ಚರಣಕೆರಗಲಿ - ಚಕ್ಷು
ಎರಕದಿಂದಲಿ ನಿನ್ನ ನೋಡಲಿ ಹರಿಯೆ
ನಿರುಮಾಲ್ಯ ನಾಸ ಘ್ರಾಣಿಸಲಿ - ಎನ್ನ
ಕರಣ ಗೀತಂಗಳ ಕೇಳಲಿ ಹರಿಯೆ ॥ ೧ ॥

ನಾಲಗೆ ನಿನ್ನ ಕೊಂಡಾಡಲಿ ಎನ್ನ
ತೋಳು ಕರಂಗಳ ಮುಗಿಯಲಿ ಹರಿಯೆ
ಕಾಲು ತೀರ್ಥಯಾತ್ರೆಗೆ ಪೋಗಲಿ - ಮನ
ಒಲೈಸಿ ನಿನ್ನನು ಸ್ಮರಿಸಲಿ ಹರಿಯೆ ॥ ೨ ॥

ಚಿತ್ತ ನಿನ್ನೊಳು ಮುಳುಗಾಡಲಿ - ನಿನ್ನ
ಭಕ್ತ ಜನರ ಸಂಗ ದೊರಕಲಿ ಹರಿಯೆ
ತತ್ತ್ವ ಯೋಗಾಭ್ಯಾಸಕ್ಕಾಗಲಿ - ಉಕ್ಕಿ
ಸತ್ಯ ಮೂರುತಿ ನಮ್ಮ ಪುರಂದರ ವಿಠಲ ॥ ೩ ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

**ಎರಕ** = ಪ್ರೀತಿ

**ಚಕ್ಷು** = ಕಣ್ಣು, ಅಧ್ಯಾತ್ಮ ಜ್ಞಾನ ಬೋಧಕ, ದೃಶ್ಯ

**ನಾಸಾ** = ಮೂಗು

**ನಿರುಮಾಲ್ಯ = ನಿರ್ಮಾಲ್ಯ** = ದೇವರ ಮೇಲೆ ಏರಿಸಿ ತೆಗೆದ ಹೂ, ಮುಂತಾದವು

**ಕರಣ** = ಕಿವಿ, ಕರ್ಣ

**ಒಲೈಸಿ** = ಒಲಿದು, ಅನುಸರಿಸಿ

**ತತ್ತ್ವ ಯೋಗಾಭ್ಯಾಸಕ್ಕಾಗಲಿ - ಉಕ್ತಿ** = ನನ್ನ ಮಾತುಗಳೆಲ್ಲ ತತ್ವ ಯೋಗ (ವೇದಾಂತ)ದಾ ಅಭ್ಯಾಸದಲ್ಲಿ ತೊಡಗಲಿ

**Classification:** Keerthane
**Ankita:** purandara vittala
**Location:** NA
**Category:** Pooja Tatva, Binnaha
**Sub-Category:** hrudaya, padma, Krishna, priti, nirmalya, moogu, nalige, kai, tirtha, mana, smarane, chitta, tatva, satya
**Pravachana:** NA
**Explanation:** NA